# ಟೋಪಿ ವ್ಯಾಪಾರಿ ಮತ್ತು ಕೋತಿಗಳು

## ಚಿತ್ರ ನೋಡಿ ಕಥೆ ಹೇಳಿ



ನೀತಿ - ಉಪಾಯ ಬಲ್ಲವನಿಗೆ ಅಪಾಯವಿಲ್ಲ

# ಕಥೆ - ಪಾರಿವಾಳ ಮತ್ತು ಬೇಟೆಗಾರ



ಒಂದು ದಿನ ಒಬ್ಬ ಬೇಟೆಗಾರನು ಪಕ್ಷಿಗಳನ್ನು ಹಿಡಿಯಲು ಬಲೆ ಹಾಸಿದ. ಅಲ್ಲಿ ಕಾಳುಗಳನ್ನು ಚೆಲ್ಲಿದ. ತಾನು ದೂರ ಹೋಗಿ ಕುಳಿತ. ಸ್ವಲ್ಪ ಹೊತ್ತು ಕಳೆಯಿತು. ಅನೇಕ ಪಾರಿವಾಳಗಳು ಕಾಳಿನ ಆಸೆಗೆ ಅಲ್ಲಿಗೆ ಬಂದವು. ಬಲೆಯಲ್ಲಿ ಸಿಕ್ಕಿಕೊಂಡವು. ಆಗ ಅವಕ್ಕೆ ಬಹಳ ಗಾಬರಿಯಾಯಿತು. ಜೀವಭಯದಿಂದ ನಡುಗಿದವು. ಕಡೆಗೆ ಅವು ಒಂದು ಉಪಾಯ ಮಾಡಿದವು. ಎಲ್ಲವೂ ಸೇರಿ ಬಲೆ ಸಮೇತ ಆಕಾಶಕ್ಕೆ ಹಾರಿದವು. ಅಪಾಯದಿಂದ ಪಾರಾದವು. ಅವು ಒಗ್ಗಟ್ಟಿನಿಂದ ಈ ಕೆಲಸ ಮಾಡಿದವು. ಆದುದರಿಂದ ಅವುಗಳ ಪ್ರಾಣ ಉಳಿಯಿತು.

**ನೀತಿ - ಒಗ್ಗಟ್ಟಿನಲ್ಲಿ ಬಲವಿದೆ**